
# ನೂತನ ಲೋಕಸಭಾ ಕಟ್ಟಡಕ್ಕೆ 'ಅನುಭವ ಮಂಟಪ' ಹೆಸರಿಡಲು ಸಭಾಪತಿ ಬಸವರಾಜ ಹೊರಟ್ಟಿ ಲೋಕಸಭಾಧ್ಯಕ್ಷ ಓಂ ಬಿರ್ಲಾಗೆ ಮನವಿಪತ್ರ

**ಬೆಂಗಳೂರು ಸೆ.24:** ನವದೆಹಲಿ ಯಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ಲೋಕಸಭಾ ನೂತನ ಸಂಕೀರ್ಣದ ಕಟ್ಟಡವೊಂದಕ್ಕೆ 'ಅನುಭವ ಮಂಟಪ' ಎಂದು ನಾಮಕರಣ ಮಾಡುವಂತೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಆದ್ಯತಾಪೂರ್ವಕ ಮನವಿ ಮಾಡಿದ್ದಾರೆ.



ಈ ಕುರಿತು ವಿಧಾನ ಸೌಧದಲ್ಲಿಂದು ಲೋಕಸಭಾಧ್ಯಕ್ಷ ಮಾನ್ಯ ಶ್ರೀ ಓಂ ಬಿರ್ಲಾ ಅವರಿಗೆ ಮನವಿಯೊಂದನ್ನು ಸಲ್ಲಿಸಿರುವ ಸಭಾಪತಿ ಬಸವರಾಜ ಹೊರಟ್ಟಿ 12ನೇ ಶತಮಾನದಲ್ಲಿ ಅಲ್ಲಮಪ್ರಭು ಮತ್ತು ಬಸವಾದಿ ಶರಣರು ನಿರ್ಮಿಸಿದ ಅನುಭವ ಮಂಟಪ ಇಡೀ ವಿಶ್ವದ ಪ್ರಪ್ರಥಮ ಶಾಸನ ಸಭೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಸಮಾನತೆಯನ್ನು ತೊಡೆದು ಹಾಕಿ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ಸಂದೇಶ ಸಾರುವ ಸಾರ್ವಕಾಲಿಕ ವಿಚಾರಧಾರೆಯ ಅಡಿಯಲ್ಲಿ ನಿರ್ಮಾಣ ಗೊಂಡಿದ್ದ ಅನುಭವ ಮಂಟಪ ಪ್ರಜಾಪ್ರಭುತ್ವ ಪರಿಕಲ್ಪನೆಗೆ ಮೂಲ ಅಡಿಪಾಯ ಹಾಗೂ ಆಶಯವಾಗಿದೆ. ಶ್ರೇಷ್ಠ ಸಮಾಜ ಸುಧಾರಕ, ದಾರ್ಶನಿಕ ಹಾಗೂ ಅತ್ಯುತ್ತಮ ಆಡಳಿತಗಾರರಾಗಿದ್ದ ಬಸವಣ್ಣನವರು ತಮ್ಮ ವಚನಗಳ ಮೂಲಕ ಸಾಮಾಜಿಕ ಸಬಲೀಕರಣ, ಸೌಹಾರ್ದತೆ, ಸಹೋದರತ್ವ ಹಾಗೂ ಸಮಾನತೆ ಕುರಿತು ಇಡೀ ಸಮಾಜಕ್ಕೆ ಸಂದೇಶ ನೀಡಿದ್ದಾರೆ. ತಮ್ಮ ಜೀವನದುದ್ದಕ್ಕೂ ಸಾಮಾಜಿಕ ಒಳಗೊಳ್ಳುವಿಕೆ ಕುರಿತು ಬೋಧಿಸಿರುವ ಬಸವಣ್ಣನವರು ಲಿಂಗ ಸಮಾನತೆ ಬಗ್ಗೆ 12ನೇ ಶತಮಾನದಲ್ಲಿಯೇ ಕ್ರಾಂತಿಕಾರಿ ಚಳವಳಿ ಮೂಲಕ ಇಡೀ ಮನುಕುಲಕ್ಕೆ ಮಾನವೀಯತೆಯ ಸಂದೇಶ ಸಾರಿದ್ದಾರೆ. ಅಂತಹ ಮಹಾನ್ ಪುರುಷರು ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ ನಿರ್ಮಿಸಿದ್ದ ಅನುಭವ ಮಂಟಪ ಸರ್ವ ಜಾತಿ, ಜನಾಂಗ ಸಮುದಾಯ ಹಾಗೂ ಲಿಂಗಗಳಿಗೆ ಪ್ರಾತಿನಿಧ್ಯ ನೀಡಿ ಪ್ರಜಾಸತ್ತಾತ್ಮಕ ಮೌಲ್ಯಗಳ ವರ್ಧನೆಯ ಬೀಜಾಂಕುರ ಮಾಡಿದ್ದಾರೆ. ಬಸವಾದಿ ಶರಣರು ರಚಿಸಿರುವ ಅಸಂಖ್ಯಾತ ವಚನಗಳೇ ಇಂದಿನ ಸಂವಿಧಾನದ ಅನುಚ್ಛೇದ ಗಳಾಗಿ ರೂಪುಗೊಂಡಿರು ವುದು ಹೆಮ್ಮೆಯ ವಿಷಯವಾಗಿದೆ ಎಂದು ಬಸವರಾಜ ಹೊರಟ್ಟಿ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಇಡೀ ಜಗತ್ತಿಗೇ ಮಾನವೀಯತೆಯ ಹಾಗೂ ಪ್ರಜಾಸತ್ತಾತ್ಮಕ ಸಂದೇಶ ಸಾರುವ ಅನುಭವ ಮಂಟಪದ ಹೆಸರನ್ನು ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ನೂತನ ಲೋಕಸಭಾ ಸಂಕೀರ್ಣದ ಕಟ್ಟಡ ವೊಂದಕ್ಕೆ ನಾಮಕರಣ ಮಾಡುವ ಮೂಲಕ ಕಾಯಕವೇ ಕೈಲಾಸವೆಂದು ಇಡೀ ಜಗತ್ತಿಗೆ ಕಾಯಕನಿಷ್ಠೆಯ ಗೌರವ ಹೆಚ್ಚಿಸಿರುವ ಮಹಾತ್ಮಾ ಬಸವೇಶ್ವರರ ಹೆಸರನ್ನು ಅಜರಾಮರ ವಾಗಿಸುವ ಮೂಲಕ ಮುಂದಿನ ಪೀಳಿಗೆಗೆ ಜ್ಞಾನದಾಸೋಹಕ್ಕೆ ದೃಢ ಸಂಕಲ್ಪ ಕೈಗೊಳ್ಳಲು ತಾವು ಮುಂದಡಿ ಇಡಬೇಕೆಂದು ಕೋರುವು ದಾಗಿ ಮಾನ್ಯ ಸಭಾಪತಿ ಬಸವರಾಜ ಹೊರಟ್ಟಿ ಮನವಿ ಮಾಡಿದ್ದಾರೆ.

# ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಬಲಗೊಳ್ಳುವ ಪರಿಸರ ರೂಪಿತವಾಗಬೇಕು: ಓಂ ಬಿರ್ಲಾ

ಬೆಂಗಳೂರು ಸೆ.24: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಯ್ಕೆಗೊಂಡ ಶಾಸಕರು ಸದನದ ಗೌರವ ಹೆಚ್ಚಿಸುವಂತೆ ಹಾಗೂ ಸಾಮಾಜಿಕ ಬದುಕಿನಲ್ಲಿ ಕೂಡ ಗೌರವ ಹೆಚ್ಚಾಗುವಂತೆ ನೋಡಿಕೊಳ್ಳಬೇಕು. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಬಲಿಷ್ಠಗೊಳ್ಳುವ ಪರಿಸರ ರೂಪಿತವಾಗಬೇಕು. ಎಂದು ಲೋಕಸಭೆಯ ಅಧ್ಯಕ್ಷ ಓಂ ಬಿರ್ಲಾ ಹೇಳಿದರು. ಭಾರತ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ 'ಪ್ರಜಾಪ್ರಭುತ್ವ: ಸಂಸದೀಯ ಮೌಲ್ಯಗಳ ರಕ್ಷಣೆ' ಕುರಿತು ಇದೇ ಮೊದಲ ಬಾರಿಗೆ ಕರ್ನಾಟಕ ವಿಧಾನಮಂಡಲ ಜಂಟಿ ಅಧಿವೇಶನವನ್ನುದ್ದೇಶಿಸಿ ಅವರು ಮಾತನಾಡಿ ಅವರು ಈ ಹಿಂದೆ ಸದನಗಳನ್ನು ದೇವಸ್ಥಾನಗಳಂತೆ ಭಾವಿಸಲಾಗುತ್ತಿತ್ತು.ಆ

ದರೆ ಪ್ರಸಕ್ತ ದಿನಗಳಲ್ಲಿ ಸದನಗಳಲ್ಲಿ ನಡೆಯುತ್ತಿರುವ ಅಹಿತಕರ ವ್ಯವಸ್ಥೆ ರಾಜಕೀಯ ಕಚ್ಚಾಟ ಹೆಚ್ಚುತ್ತಿರುವುದು ಬೇಸರಕ್ಕೆ ಕಾರಣವಾಗಿದೆ. ಸ್ವಾತಂತ್ರ ಬಳಿಕ ಸದನದಲ್ಲಿ ವಾದ ವಿವಾದ, ಸಂವಾದ ಮತ ಬದಲಾವಣೆ ಸಂವಾದ ನಡೆಯಬೇಕೆಂಬ ಉದ್ದೇಶದಿಂದ ಕಾನೂನು ರೂಪಿಸಲಾಗಿತ್ತಾದರೂ ಇಂದಿನ ದಿನಗಳಲ್ಲಿ ಸಂವಾದ ನಡೆಯದೇ ಕೇವಲ ರಾಜಕೀಯ ಕೆಸರೆರಚಾಟ ನಡೆಯುತ್ತಿರುವುದು ಬೇಸರದ ಸಂಗತಿ ಎಂದವರು ಬೇಸರಿಸಿಕೊಂಡರು.

ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ಪ್ರಶ್ನೆಗಳು ಎದ್ದಿವೆ.ನಮ್ಮ ನಮ್ಮ ಸದನಗಳಲ್ಲಿ ವ್ಯಾಪಕ ಚರ್ಚೆ ಉತ್ತಮ ಕಾನೂನು ರೂಪಿತವಾಗಬೇಕು, ಶಾಸಕರು ತಪ್ಪದೇ ಸದನದಲ್ಲಿ ಹಾಜರಾಗಬೇಕಿದೆ. ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಸಂಸದೀಯ ವ್ಯವಸ್ಥೆಯನ್ನು ಬಲಿಷ್ಠಗೊಳಿಸುತ್ತೇವೆಯೋ ವ್ಯಾಪಕ ಚರ್ಚೆ ನಡೆಸುತ್ತೇವೋ ಅಷ್ಟು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಬಲಿಷ್ಠಗೊಳ್ಳುತ್ತದೆ. ದೇಶದ ಜನರ ಸಾಮೂಹಿಕ ಕಲ್ಯಾಣವಾಗಬೇಕು. ಹೀಗಾಗಿ ಸಾಮೂಹಿಕ ಕಲ್ಯಾಣಕ್ಕಾಗಿ ಒತ್ತು ನೀಡಬೇಕು.ಪಂಚಾಯತಿ, ನಗರಸಭೆ, ವಿಧಾನಸಭೆ ಯಾವುದೇ ಸಂಸತ್ ಇರಲಿ ಎಲ್ಲಾ ಸದನಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಬಲಿಷ್ಠಗೊಳ್ಳಬೇಕು. ಸಂಸದೀಯ ವ್ಯವಸ್ಥೆ ರಾಜವ್ಯವಸ್ಥೆಯ ಮೂಲವಾಗಿದೆ. ಹೀಗಾಗಿ ಸಂಸದೀಯ ವ್ಯವಸ್ಥೆಯನ್ನು ಬಲಿಷ್ಠಗೊಳಿಸಬೇಕೆಂದು ಓಂ ಬಿರ್ಲಾ ಕರೆ ನೀಡಿದರು.



ಗೌರವಾನ್ವಿತ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಜ್ಞಾಪನಾ ಪತ್ರವನ್ನು ನೀಡಿದ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಜೊತೆಯಲ್ಲಿದ್ದರು.

# ಉತ್ತಮ ಶಾಸಕ ಪ್ರಶಸ್ತಿ: ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಘೋಷಣೆ

ಬೆಂಗಳೂರು, ಸೆ.24; ಇಂದು ಉಭಯ ಸದನಗಳನ್ನು ಉದ್ದೇಶಿಸಿ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಮಾತನಾಡುವುದಕ್ಕೆ ವಿಪಕ್ಷ ಕಾಂಗ್ರೆಸ್ ವಿರೋಧ ವ್ಯಕ್ತ ಪಡಿಸಿ, ಸದನವನ್ನು ಬಹಿಷ್ಕರಿಸಿದೆ. ಇದರ ಮಧ್ಯೆ ಲೋಕಸಭೆಯ ಸದಸ್ಯರಿಗೆ ನೀಡುವಂತೆ ಉತ್ತಮ ಶಾಸಕ ಪ್ರಶಸ್ತಿಯನ್ನು ರಾಜ್ಯದಲ್ಲೂ ಘೋಷಣೆ ಮಾಡಿದ್ದು, ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರಿಗೆ ನೀಡಲಾಗಿದೆ. ಮಧ್ಯಾಹ್ನದ ಭೋಜನ ವಿರಾಮದ ಬಳಿಕ ಆರಂಭವಾದಂತ ಉಭಯ ಸದನಗಳನ್ನು ಉದ್ದೇಶಿಸಿ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರ ಭಾಷಣಕ್ಕೆ ವಿರೋಧಿಸಿ ಕಾಂಗ್ರೆಸ್ ಉಭಯ ಸದನಗಳನ್ನು ಬಹಿಷ್ಕರಿಸಿದೆ. ಇದೇ ಸಂದರ್ಭದಲ್ಲಿ ಸದನದಲ್ಲಿ ಲೋಕಸಭೆಯಲ್ಲಿ ಸದಸ್ಯರಿಗೆ ನೀಡುವಂತೆ ಉತ್ತಮ ಸದಸ್ಯ ಪ್ರಶಸ್ತಿಯ ಸಂಪ್ರದಾಯಕ್ಕೆ ರಾಜ್ಯದಲ್ಲು ನಾಂದಿ ಹಾಡಲಾಯಿತು. ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಉತ್ತಮ ಶಾಸಕ ಪ್ರಶಸ್ತಿಯನ್ನು ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರಿಗೆ ಘೋಷಣೆ ಮಾಡಿದರು. ಈ ಸಂದರ್ಭದಲ್ಲಿ ಲೋಕಸಭೆ ಸ್ಪೀಕರ್ ಓಂ ಬೀರ್ಲಾ ಅವರು ಯಡಿಯೂರಪ್ಪ ಅವರಿಗೆ ಪ್ರಶಸ್ತಿ ಪ್ರಧಾನ ಮಾಡಿದರು. ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ಇತರರು ಹಾಜರಿದ್ದರು

# ‘ಹಳಿತಪ್ಪಿದ ರಾಜಕೀಯ ಚಕ್ರ ಮತ್ತೆ ತಿರುಗದಿರಲಿ’

**ಬೆಂಗಳೂರು, ಸೆ.24:** ಹಳಿತಪ್ಪಿದ ರಾಜಕೀಯ ಚಕ್ರ ಮತ್ತೆ ತಿರುಗದಂತೆ ನೋಡಿಕೊಳ್ಳಬೇಕೆಂದು ಸಭಾಪತಿ ಬಸವರಾಜ ಹೊರಟ್ಟಿ ಸೂಚ್ಯವಾಗಿ ಹೇಳಿದ್ದಾರೆ.



ವಿಧಾನಸಭೆ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಹೊರಟ್ಟಿ, ಮುಕ್ತವಾಗಿ ಚುನಾವಣೆಗಳು ನಡೆಯಬೇಕು.ಹಳಿತಪ್ಪಿದ ರಾಜಕೀಯ ಚಕ್ರ ಮತ್ತೆ ತಿರುಗದಂತೆ ನೋಡಿಕೊಳ್ಳಬೇಕು ಚುನಾವಣೆಗಳು ಮುಕ್ತವಾಗಬೇಕು. ಮತಗಳ ಗಳಿಕೆಯೇ ಮಾನದಂಡವಾಗಿರುವ ಚುನಾವಣೆ ಅಸ್ತ್ರವಾಗಿರುವುದು ಬೇಸರದ ಸಂಗತಿ. ಚುನಾವಣಾ ಆಯೋಗದ ಪರಿಣಾಮಕಾರಿ ನಿಯಮಗಳು ಸಮರ್ಪಕವಾಗಿ ಜಾರಿಯಾಗಿಲ್ಲ. ಜನಪ್ರತಿನಿಧಿಗಳು ಮುಕ್ತವಾಗಿ ಚುನಾವಣೆ ನಡೆಸಬೇಕು. ಸಂಸದೀಯ ಮೌಲ್ಯಗಳನ್ನು ಪಾಲಿಸದೇ ಹೋದಲ್ಲಿ ಮುಂದಿನದಿನಗಳಲ್ಲಿ ಪ್ರಜಾಪ್ರಭುತ್ವಕ್ಕೆ ಸಂಚಕಾರ ಒದಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಜನಸಾಮಾನ್ಯರ ಬದುಕಿಗೆ ಬಸವಣ್ಣನವರ ಕಲ್ಪನೆಗಳು ಅಡಿಪಾಯವಾಗಿವೆ. ಬಸವಣ್ಣನವರ ಅನುಭವಮಂಟಪ ಜಾಗತಿಕ ಪ್ರಖ್ಯಾತ ಹೊಂದಿದೆ. ವೈವಿಧ್ಯಮಯ ಭಾರತದಲ್ಲಿ ಪ್ರಜಾಪ್ರಭುತ್ವದ ಕಲ್ಪನೆ ಮಹತ್ತರವಾಗಿದೆ. ಸರ್ವರಿಗೂ ಸಮಪಾಲಿನ ಜೊತೆಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಾಗಿದೆ.ಲೋಕಸಭಾ ಅಧ್ಯಕ್ಷರು ಓಂ ಬಿರ್ಲಾ ಅವರ ಉಪಸ್ಥಿತಿಗೆ ಇಂದಿನ ಜಂಟಿ ಅಧಿವೇಶನ ಸಾಕ್ಷಿಯಾಗಿದೆ. ಏಕತೆಯಡಿ ಜನತೆಯ ಸರ್ವತೋಮುಖ ಅಭಿವೃದ್ಧಿಗೆ ಸಾಧಿಸಬೇಕಿದೆ. ನಿಷ್ಪಕ್ಷಪಾತ ಎಲ್ಲರನ್ನು ಸಮಾನವಾಗಿ ಕಾಣುವ ವೇದಿಕೆಯೆಂದರೆ ಸದನ. ಅನುಕೂಲ ಸಿಂಧು ರಾಜಕಾರಣ, ಆರೋಪ ಪ್ರತ್ಯಾರೋಪಗಳು ಧೇಯಕ ಮಂಡನೆಯನ್ನು ಅಗತ್ಯಕ್ಕೆ ತಕ್ಕಂತೆ ಸದನದಲ್ಲಿ ಜಾರಿ ಮಾಡದೇ ಅನುಕೂಲಕ್ಕೆ ತಕ್ಕಂತೆ ವಿಧೇಯಕ ಮಂಡನೆಯನ್ನು ಜಾರಿ ಮಾಡಲಾಗುತ್ತದೆ.

ಚಿಂತಕರ ಚಾವಡಿ ಈಗ ಮೊದಲಿನಂತಿಲ್ಲ. ರಾಜಕೀಯ ತಿಕ್ಕಾಟಗಳ ನಡುವೆ ವಿಧೇಯಕಗಳು ಸಮರ್ಪಕ ಚರ್ಚೆಯಾಗದೇ ಪಾಸು ಮಾಡಲಾಗುತ್ತಿದೆ. ಸಮಾಜದಲ್ಲಿ ಬೇರು ಬಿಟ್ಟಿರುವ ಇಂತಹ ವ್ಯವಸ್ಥೆ ಪುನಾರವರ್ತನೆಯಾಗದಂತೆ ನೋಡಿಕೊಳ್ಳಬೇಕು. ಮಹಿಳೆಯರ ಮೇಲಿನ ಅತ್ಯಾಚಾರ ಮಹಿಳಾ ದೌರ್ಜನ್ಯ ಹೆಚ್ಚುತ್ತಿದ್ದು, ಇದಕ್ಕಾಗಿ ಗಾಂಧೀಜಿ ಕಂಡ ಕನಸಿನ ರಾಮರಾಜ್ಯದ ಕಾನೂನನ್ನು ಜಾರಿಗೊಳಿಸುವುದು ಸದನಕ್ಕೇನು ಕಷ್ಟಸಾಧ್ಯವಿಲ್ಲ ಎಂದರು.

ಸಭಾಪತಿ ಸಭಾಧ್ಯಕ್ಷರ ಸ್ಥಾನಕ್ಕೆ ಚ್ಯುತಿಬಾರದಂತೆ ಸದನದಲ್ಲಿ ಸದಸ್ಯರು ನಡೆದುಕೊಳ್ಳಬೇಕು.ಸ್ಥಾಯಿಸಮಿತಿ ಸಭೆಗಳಲ್ಲಿ ಸದಸ್ಯರು ಪಾಲ್ಗೊಳ್ಳುವುದು ಕೂಡ ಅತ್ಯಗತ್ಯವಾಗಿದೆ. ಮೂರು ಅಂಗಗಳು ಪ್ರಜಾಪ್ರಭುತ್ವಕ್ಕೆ ಪೂರಕವಾಗಿ ನಡೆಯಬೇಕು.ಆದರೆ ಇತ್ತೀಚಿನ ದಿನಗಳಲ್ಲಿ ಶಾಸಕಾಂಗ ಕಾರ್ಯಾಂಗದ ಮೇಲೆ ದಬ್ಬಾಳಿಕೆ ಮಾಡುತ್ತಿರುವುದು ಹೆಚ್ಚಾಗಿದೆ. ವ್ಯಕ್ತಿನಿಷ್ಠ ಸಮಾಜಕ್ಕಿಂತ ವಸ್ತುನಿಷ್ಠ ಸಮಾಜ ರೂಪಿತವಾಗಬೇಕು. ಪ್ರಜೆಗಳ ಆಶೋತ್ತರಕ್ಕೆ ಸ್ಪಂದಿಸಿ ಸ್ವಜನಪಕ್ಷಪಾತವನ್ನು ಬಿಟ್ಟು ಪ್ರಜಾಪ್ರಭುತ್ವ ಉಳಿಸಲು ಎಲ್ಲಾ ಜನಪ್ರತಿನಿಧಿಗಳು ಮುಂದಾಗಬೇಕು ಎಂದು ಕರೆ ನೀಡಿದರು.



ವಿಧಾನಸಭೆಯಲ್ಲಿ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸನ್ಮಾನಿಸಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ವಿಧಾನ ಸಭೆಯ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಉಪಸ್ಥಿತರಿದ್ದರು.



ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಇಂದು  ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಜಂಟಿ ಅಧಿವೇಶನದಲ್ಲಿ ಮಾಜಿ  ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ವಿಧಾನಸಭಾಧ್ಯಕ್ಷ  ವಿಶ್ವೇಶ್ವರ ಹೆಗಡೆ ಕಾಗೇರಿ , ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.